3. ಸದರೀ ಮೇಲ್ಕಂಡ ಚಿಲ್ಲರೆ ಯಿನಾಂಗಳ ಬಗ್ಯೆ ಸ್ 1881ನೇ ಇಸವಿ ಡಿಶಂಬರ್ 6ನೇ ತಾರೀಖಿನ 21ನೇ ನಂಬರು ಇಸ್ತಿಹಾರುನಾವೇ ಪ್ರಕಾರ ಕೊಡಲ್ಪಟ್ಟ ಪಟ್ಟೇಗಳು ರದ್ದು ಮಾಡಲ್ಪಟ್ಟಿರುತ್ತೆಂದು ಇದರ ದೆಶೆಯಿಂದ ಪ್ರಕಟಿಸಲ್ಪಡುತ್ತೆ.

ನಂ. 2. ತಾರೀಖು 23ನೇ ನವೆಂಬರ್ 1887ನೇ ಇಸವಿ.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಚಾಮರಾಜನಗರ ಮತ್ತು ಮೊಳಕಾಲ್ ಮುರು ತಾಲ್ಲೂಕುಗಳಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು 144 ಫೈನಲ್‌ಟೈಟಿಲ್‌ಡೀಡ್ಡು ಯಾನೆ ಖಾಯಂ ಪಟ್ಟೆಗಳು ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರವರಗಳಿಗೆ ಬಟವಾಡೇ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕುಗಳ ಅಮಲ್‌ದಾರ್‌ಗಳಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದುಕೊಳ್ಳುವ ಬಗ್ಯೆ ಸದರೀ ಯಿನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕುಗಳ ಅಮಲ್‌ದಾರ್‌ಗಳು ಅಂಥಾ ನೋಟೀಸುಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಮೇಲ್ಕಂಡ ಚಿಲ್ಲರೆ ಇನಾಂಗಳ ಬಗ್ಯೆ ಮೊದಲೇ ಈ ಆಫಿಸಿನ 1881ನೇ ಇಸವಿ ಆಕ್ಟೋಬರು 28ನೇ ತಾರೀಖಿನ 17ನೇ ನಂಬರು ಮತ್ತು ಡಿಶಂಬರು 13ನೇ ತಾರೀಖಿನ 22ನೇ ನಂಬರು ಇಸ್ತಿಹಾರ್‌ನಾಮೆಗಳ ಪ್ರಕಾರ ಕೊಡಲ್ಪಟ್ಟ ಟೈಟಿಲ್‌ಡೀಡ್ಡುಗಳು ರದ್ದುಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ಪೆಪ್ಪೇರಪಳ್ಳೀಲಿರುವ ತಿಪ್ಪರಾಜು ವಿಷಯದಲ್ಲಿ—

ಸ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 843.

ಹುಕ್ಕುಂ.

ಮೇಲ್ಕಂಡ ತಿಪ್ಪರಾಜನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜಿಯವರಾದ ಮೆ|| ಸಿ. ಕ್ರೈಸ್ ಸಾಹೇಬರವರ ರೂಬರೂ ಅರ್ಜೀದಾರನಾಡ ತಿಪ್ಪರಾಜನ್ನ ಕುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್‌ರಾದ 3ನೇ ಸುಬ್ಬರಾಜನಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, 1—2ನೇ ಯವರು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ತಿಪ್ಪರಾಜು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತರವಾಗಿಯಾಗಲಿ ದಸ್ತಗೀರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ 1887ನೇ ಇಸವಿ ಅಕ್ಟೋಬರ್ 28ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿನಿ ಕೊಡಲ್ಪಟ್ಟಿತು.

ಸಾಲದಪಟ್ಟ.

ನಂಬರು.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜೊತೆಗೆ.	ಯಾವಾಗ ದೇಣೆ ಜಪ್ತಿಯಾಗಬೇಕೆಂದು ಜಪ್ತಿಯಾಗಿದೆಯೋ ಆ ಸಂಗತಿ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಬೆಂಗಳೂರುಬಳಿ ಚಿಕ್ಕವಾವಳ್ಳೀಲಿರುವ ರಾಮಸ್ವಾಮಿಶಟ್ಟಿ	500—0—0 150—0—0	.. ..	ಡಿಕ್ರೀ ಬಾಬತು ತಮಸೂಕು ಬಾಬತು	
2	ಕನಕನಪಾಳ್ಯದ ತಿಮ್ಮಯ್ಯ ..	10—0—0	..	ತಪಸೀಲ್ ಯಿಲ್ಲಾ	
3	ಬೆಂಗಳೂರುಬಳಿ ವೆಂಕ್ಟಾರಹಳ್ಳೀಲಿರುವ ಸುಬ್ಬರಾಜು	36—6—9	..	ಡಿಕ್ರೀ ಬಾಬತು	
	ಜುಮ್ಲಾ	696—6—9			

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ತಾ|| ಕೋನಪ್ಪನ ಅಗ್ರಹಾರದಲ್ಲಿ ಇರುವ ಪಿಚ್ಚಗುಂಟ್ಲು ಮುನಿಯಲ್ಲಿಯ ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ನಂಬರು ಮಿಸಲೇನಿಯಸ್. 766.

ಹುಕ್ಕುಂ.

ಮೇಲ್ಕಂಡ ಮುನಿಯಲ್ಲಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜ್‌ರಾದ ಮೆ|| ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜಿದಾರಳಾದ ಮುನಿಯಲ್ಲಿನಯನ್ನ ಖುದ್ದಾಗಿಯು ಮತ್ತು ಸದರೀಯವಳ ಲೇಣೇದಾರಾದ ವೆಂಕಟಸುಬ್ಬಯ್ಯ ವಲಿಯಾರ್‌ಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮುನಿಯಲ್ಲಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥಿರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸದ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ನವಂಬರ್ 4ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನೀಲೇ ಕೊಡಲ್ಪಟ್ಟಿತು.

ಸಾಲದಪಟ್ಟ.

ನಂಬರ್.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜೊತೆಗೆ.	ಯಾವಾಗ ದೇಣೆ ಜಪ್ತಿಯಾಗಬೇಕೆಂದು ಜಪ್ತಿಯಾಗಿದೆಯೋ ಆ ಸಂಗತಿ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಬೆಂಗಳೂರಲ್ಲಿ ಇರುವ ವೆಂಕಟಸುಬ್ಬ ವೊದಲಿಯಾರು.	68 8 0	..	ಡಿಕ್ರೀ ಬಾಬತು.	

ದಿವಾಳಿಯಾದ ಡಿಕ್ರೀ ದೇಣೇದಾರ ಚಿಕ್ಕಬಳ್ಳಾಪುರದಲ್ಲಿರುವ ಜಟ್ಟಿ ತೀತಮ್ಮನ ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ನಂ. ಮಿ|| 893.

ಹುಕ್ಕುಂ

ಮೇಲ್ಕಂಡ ಜಟ್ಟಿ ತೀತಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜ್‌ರಾದ ಮೆ|| ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜಿದಾರಳಾದ ತೀತಮ್ಮನ್ನ ಖುದ್ದಾಗಿ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದಫ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, 1–2ನೇ ಕ್ರಡಿಟರ್‌ಯವರೂ ಹಾಜರಾಗಲಿಲ್ಲಾ

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನೆ ಸದರೀ ಕೀತಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾಪವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾಪವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೊಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್‌ದಾರಿಯಿಂದ ಸಹ ಆವಳನ್ನ ನಿಖಾಲಸ್ ಮಾಡಲಾಗಿರುತ್ತೆಯುಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1887ನೇ ಇಸವಿ ನವೆಂಬರ್ 11ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ಸಮ್ಮ ದಸ್ತಖತ್‌ನೀಲೇ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದ ಅವರುಗಳ ವಾಸಸ್ಥಳ.	ಸೊಲಿಗಗ.	ಯಾವಾಗ ಹೇಳಿಕೊಂಡದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾವರೂ ಇದ್ದರೆ.	ಟಿಪ್ಪಣಿ.
1	ಚಿಕ್ಕಬಳ್ಳಾಪುರದಲ್ಲಿರುವ ವಾಟದ ಹೊಸವಳ್ಳಿ ವೆಂಕಟನಾರಾಯಣ ಮೈನರ್ ಗಾರ್ಡಿಯರ್ನ್ ನಾರಣಮ್ಮ.	50	..	ಚಿಕ್ಕಬಳ್ಳಾಪುರ ಮುನಸಿಫ್ ಕೋರ್ಟು 1887ನೇ ಇಸವಿ ಸಿವಿಲ್ 71ನೇ ನಂ. ಡಿಕರೀ ಬಾಬತು.	
2	ಚಿಕ್ಕಬಳ್ಳಾಪುರದಲ್ಲಿರುವ ಬಂಡಾರೀ ಮುನಿಯಪ್ಪ.	10	..	ಪತ್ರದ ಬಾಬತು 20 ರೂಪಾಯಿ ಪೈಕಿ ವಸೂಲ್ ಜಾತಾ ಬಾಕಿ.	
	ಜುಮ್ಲಾ ...	60			

ಸಿ. ಕೈನ್ಸ್,
ಸಬ್ ಜಡ್ಜ್.

ತಾರೀಖು 10ನೇ ನವೆಂಬರ್ 1887.

ಸ್ಯ 1888ನೇ ಇಸವಿ ಜನವರೀ ಗುರ್ಸೇಲಾಗಾಯಿತು 1889ನೇ ಇಸವಿ ಡಿಸೆಂಬರ್ 31ರ ವರಿಗೆ ಇದರಡಿ ವಿವರಿಸಲ್ಪಟ್ಟ ಮೇರೆ ಎರಡು ಸಾಲಿಗೆ ಬೆಂಗಳೂರು ಡಿಸ್ಟ್ರಿಕ್ಟ್ ಗವರ್ನಮೆಂಟ್ ಜಂಗಲ್‌ಗಳಿಂದ ಸ್ಥಾತಮೆರಾಟೂ ರೆಯಿಲ್‌ವೇಗೆ ಸಾದೇ ಸರಬರಾಯಿ ಮಾಡುವ ಬಗ್ಗೆ ಸ್ಯ 1887ನೇ ಇಸವಿ ಡಿಸೆಂಬರ್ 10ನೇ ಮಂಗಳವಾರದ ಯಿವರೀ ರುಜುಮಾಡುವವರಿಂದ ಬಂದ್ ಮತ್ತು ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ತೆಗದುಕೊಳ್ಳಲ್ಪಡುವವು:—(ಉಭಯ ಪಾರ್ಟಿಗಳಿಗೂ ತೃಪ್ತಿಕರವಾಗಿದ್ದ ಪಕ್ಷಕ್ಕೆ ಮತ್ತೊಂದು ಸಾಲಿಗೂ ಖಾಯಿಷ್ ಪ್ರಕಾರ ಕಂಟ್ರಾಕ್ಟು ರಿನ್ಯೂ ಮಾಡಿಕೊಳ್ಳಬಹುದಾಗಿಯಿರುತ್ತೆ.

ನಂಬರು.	ಸ್ಟೇರ್ಷ.	ರೆಯಿಲ್ವೇ ಸ್ಟೇರ್ಷಗೆ ಜಂಗಲ್‌ಗಳ ಸರಾಸರಿ ಫಾಸಲೆ ಮೈಲಿಗಳು.	ಮಾಹೇ ಒಂದಕ್ಕೆ ಟರ್ನ್‌ಗಳ ಸಂಖ್ಯೆ.
1	ಕೊಲೀಸ್‌ಪ್ಯಾಟೆ	14	300
2	ಚನ್ನಪಟ್ಟಣ	16	200
		ಜುಮ್ಲಾ ..	500